# All India Radio: Bangalore
# Regional Bulletin In Kannada
# 01.02.2026 / 2.30 p.m.
## ಆಕಾಶವಾಣಿ ಬೆಂಗಳೂರು
## ಪ್ರದೇಶ ಸಮಾಚಾರ
## 01.02.2026 / 2.30 p.m.

**<><><><>**

ಮುಖ್ಯಾಂಶಗಳು

1. ಸತತ ೯ನೇ ಬಾರಿಗೆ ಆಯವ್ಯಯ ಮಂಡಿಸಿದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ; ಆದಾಯ ತೆರಿಗೆ ಪಾವತಿಯ ಯಥಾಸ್ಥಿತಿ ಮುಂದುವರಿಕೆ
2. ಕ್ಯಾನ್ಸರ್ ರೋಗಿಗಳ ೧೭ ಔಷಧಗಳ ಮೇಲೆ ತೆರಿಗೆ ವಿನಾಯಿತಿ ; – ಮದ್ಯ, ಸಿಗರೇಟ್ ಬೆಲೆ ಏರಿಕೆ-ಸೋಲಾರ್, ಚರ್ಮದ ಉತ್ಪನ್ನಗಳ ಬೆಲೆ ಇಳಿಕೆ
3. ಕರಾವಳಿಯಲ್ಲಿ ತೆಂಗು, ಗೋಡಂಬಿ, ಕೊಕ್ಕೋ ಬೆಲೆ ಉತ್ಪಾದಕತೆ ಹೆಚ್ಚಿಸಲು ಆದ್ಯತೆ ; ರೈತರಿಗೆ ಬಹುಭಾಷಾ ಕೃತಕಬುದ್ಧಿಮತ್ತೆ ಬೆಂಬಲ
4. ಚೆನ್ನೈ-ಬೆಂಗಳೂರು ಸೇರಿದಂತೆ ದೇಶಾದ್ಯಂತ ೭ ಹೈಸ್ಪೀಡ್ ರೈಲು ಕಾರಿಡಾರ್ ಘೋಷಣೆ
5. ಮಹಿಳಾ ಉದ್ಯಮಿಗಳಿಗೆ ಸಿಹಿಸುದ್ಧಿ ನೀಡಿದ ಕೇಂದ್ರ ಸರ್ಕಾರ -ದೇಶಾದ್ಯಂತ ಶಿ-ಮಾರ್ಟ್ ಸ್ಥಾಪನೆಗೆ ನಿರ್ಧಾರ
6. ಬಜೆಟ್ ಮಂಡನೆಗೂ ಮುನ್ನ ಚಿನ್ನ-ಬೆಳ್ಳಿ ದರದಲ್ಲಿ ಭಾರೀ ಕುಸಿತ ; ಷೇರು ಮಾರುಕಟ್ಟೆಯಲ್ಲಿಯೂ ತಲ್ಲಣ

<><><><>

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಇಂದು ೨೦೨೬-೨೭ನೇ ಸಾಲಿನ ಆಯವ್ಯಯ ಮಂಡಿಸಿದರು. ಸತತ ೯ನೇ ಬಾರಿಗೆ ಬಜೆಟ್ ಮಂಡಿಸುವ ಮೂಲಕ ದಾಖಲೆ ಬರೆದಿದ್ದಾರೆ. ಇದೇ ಮೊದಲ ಬಾರಿಗೆ ಕರ್ತವ್ಯ ಭವನದಲ್ಲಿ ನಿರ್ಮಲಾ ಸೀತಾರಾಮನ್ ಬಜೆಟ್ ಮಂಡಿಸಿದ್ದಾರೆ. ಇದು ಪ್ರಧಾನಿ ಮೋದಿ ಸರ್ಕಾರದ ೧೫ನೇ ಬಜೆಟ್ ಮಂಡನೆಯಾಗಿದೆ. ವಿಕಸಿತ ಭಾರತವನ್ನು ಗುರಿಯಾಗಿರಿಸಿಕೊಂಡು ಯುವಶಕ್ತಿ ಬಜೆಟ್ ಮಂಡಿಸುವುದಾಗಿ ವಿತ್ತ ಸಚಿವರು ಆರಂಭದಲ್ಲೇ ತಿಳಿಸಿದರು. ಕರ್ತವ್ಯ ಭವನದಲ್ಲಿ ತಯಾರಿಸಿದ ಮೊದಲ ಬಜೆಟ್ ಇದಾಗಿದ್ದು, ಮೂರು ಕರ್ತವ್ಯದ ಬಗ್ಗೆ ಪ್ರಸ್ತಾಪಿಸಿದ ಅವರು, ಆರ್ಥಿಕ ಪ್ರಗತಿ, ಜನರ ನಿರೀಕ್ಷೆ ಈಡೇರಿಸುವುದು ಹಾಗೂ 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಕೇಂದ್ರ ಸರ್ಕಾರದ ಗುರಿ ಎಂದು ಹೇಳಿದರು.

<><><>

ಈ ಬಾರಿಯ ಬಜೆಟ್‌ನಲ್ಲಿ ಆದಾಯ ತೆರಿಗೆ ಪಾವತಿಯಲ್ಲಿ ಯಾವುದೇ ಬದಲಾವಣೆ ತರದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಏಪ್ರಿಲ್ ೧ ರಿಂದ ನೂತನ ಆದಾಯ ತೆರಿಗೆ ಕಾಯ್ದೆ ಜಾರಿಗೆ ಬರಲಿದೆ. ಜಿಎಸ್‌ಟಿ ಸರಳೀಕರಣಕ್ಕೆ ಕೇಂದ್ರ ಸರ್ಕಾರ ಕ್ರಮಕೈಗೊಂಡಿದೆ. ವಿದೇಶಿ ಪ್ರವಾಸ ಇನ್ನು ಮುಂದೆ ಅಗ್ಗವಾಗಲಿದೆ. ಅಪಘಾತ ವಿಮೆ ಪರಿಹಾರ ಪಡೆಯಲು ಇನ್ನು ಮುಂದೆ ತೆರಿಗೆ ವಿಧಿಸದಿರಲು ನಿರ್ಧರಿಸಲಾಗಿದೆ. ಜುಲೈ ೩೧ರವರೆಗೆ ಆದಾಯ ತೆರಿಗೆ ಸಲ್ಲಿಕೆಗೆ ಅವಕಾಶ ನೀಡಲಾಗಿದೆ. ತೆರಿಗೆ ಬಾಕಿ ಉಳಿಸಿಕೊಳ್ಳುವವರಿಗೆ ಶೇಕಡ ೧೦೦ರಷ್ಟು ದಂಡ ವಿಧಿಸುವ ಎಚ್ಚರಿಕೆಯನ್ನು ಕೇಂದ್ರ ಸರ್ಕಾರ ನೀಡಿದೆ. ತೆರಿಗೆ ಪಾವತಿಸದವರನ್ನು ಅಪರಾಧಿಗಳನ್ನಾಗಿ ಪರಿಗಣಿಸಲು ನಿರ್ಧರಿಸಲಾಗಿದೆ.  ಶಿಕ್ಷಣ ಆರೋಗ್ಯ ಕ್ಷೇತ್ರದಲ್ಲಿ ಶೇಕಡ ೨ ರಷ್ಟು ಟಿಸಿಎಸ್ ಕಡಿತಗೊಳಿಸಲಾಗಿದೆ. ವಿದೇಶದ ಆಸ್ತಿ ಘೋಷಣೆಗೆ ೬ ತಿಂಗಳು ಕಾಲಾವಕಾಶ ನೀಡಲಾಗಿದೆ.

**ಧ್ವನಿ: ನಿರ್ಮಲಾ ಸೀತಾರಾಮನ್ (೨೪ ಸೆಕೆಂಡ್‌ಗಳು)**

<><><>

ಇಂದಿನಿಂದ ಮದ್ಯದ ಬೆಲೆಯನ್ನು ಏರಿಕೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಬಜೆಟ್‌ನಲ್ಲಿ ಸಿಗರೇಟ್, ತಂಬಾಕು ಮತ್ತು ಪಾನ್‌ಮಸಾಲಾ ಉತ್ಪನ್ನಗಳ ಬೆಲೆ ಏರಿಕೆ ಮಾಡಲಾಗಿದೆ. ಕ್ಯಾನ್ಸರ್‌ನ ೧೭ ಔಷಧಿಗಳಿಗೆ ವಿನಾಯಿತಿ ಘೋಷಣೆ ಮಾಡಲಾಗಿದೆ. ಕ್ಯಾನ್ಸರ್ ಸೇರಿ ೭ ಅಪರೂಪದ ಕಾಯಿಲೆಗಳ ಔಷಧಿಗಳ ಬೆಲೆ ದರದಲ್ಲಿ ಕಡಿತ ಮಾಡಲಾಗಿದೆ. ಸೋಲಾರ್ ವಸ್ತುಗಳು ಹಾಗೂ ಚರ್ಮದ ಉತ್ಪನ್ನಗಳ ಬೆಲೆ, ಸೆಣಬು, ಸಿಎನ್‌ಜಿ ಇಂಧನ ದರ ಇಳಿಕೆ ಮಾಡಲಾಗಿದೆ. ಲಿಥಿಯಂ ಬ್ಯಾಟರಿ ಹಾಗೂ ವಿಮಾನ ಇಂಧನ ದರದಲ್ಲಿ ಇಳಿಕೆ ಮಾಡಲಾಗಿದೆ.

<><><>

೨೦೨೬-೨೭ರ ಬಜೆಟ್‌ನಲ್ಲಿ ಆರೋಗ್ಯ ಸೇವೆಗೆ ಬಯೋಫಾರ್ಮ ಶಕ್ತಿಗಾಗಿ ೧೦ ಸಾವಿರ ಕೋಟಿ ರೂಪಾಯಿ ಘೋಷಿಸಿದ್ದಾರೆ. ಈ ಬಯೋ ಔಷಧಿಗಳು ಮಧುಮೇಹದಂತಹ ಸಾಂಕ್ರಾಮಿಕವಲ್ಲದ ಕಾಯಿಲೆಗಳ ಹೆಚ್ಚುತ್ತಿರುವ ಹೊರೆಯನ್ನು ನಿಭಾಯಿಸಲು ಸಹಾಯ ಮಾಡಲಿದೆ ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರ ಕ್ಯಾನ್ಸರ್‌ನ ೧೭ ಔಷಧಿಗಳಿಗೆ ವಿನಾಯಿತಿ ಘೋಷಣೆ ಮಾಡಿದೆ. ಮುಂದಿನ ೫ ವರ್ಷಗಳಲ್ಲಿ ಅರಿವಳಿಕೆ, ರೇಡಿಯೋಲಾಜಿ ವಿಭಾಗ ಸೇರಿದಂತೆ ೧೦ ವಿಭಾಗಗಳಲ್ಲಿ ಒಂದು ಲಕ್ಷ ಸಂಯೋಜಿತ ಆರೋಗ್ಯ ತಜ್ಞರನ್ನು ಸರ್ಕಾರ ನೇಮಿಸಲಿದೆ. ದೇಶದಲ್ಲಿ ಹೆಚ್ಚಿನ ತುರ್ತು ಮತ್ತು ಅಪಘಾತ ಕೇಂದ್ರಗಳ ಸ್ಥಾಪನೆಗೆ ಆದ್ಯತೆ. ನಿಮ್ಹಾನ್ಸ್ ಮಾದರಿಯಲ್ಲಿ ಮಾನಸಿಕ

ಆರೋಗ್ಯ ಸಂಸ್ಥೆಗಳ ನಿರ್ಮಾಣಕ್ಕೆ ಒತ್ತು ಸೇರಿದಂತೆ ದೇಶದಲ್ಲಿ ಹೊಸದಾಗಿ ಮೂರು ಆರೋಗ್ಯ ಏಮ್ಸ್‌ಗಳ ಸ್ಥಾಪನೆ. ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರ ಸ್ಥಾಪನೆಗೂ ನಿರ್ಧರಿಸಲಾಗಿದೆ. ಜಿಲ್ಲಾಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಖಾಸಗಿ ಸಂಸ್ಥೆಗಳ ಸಹಯೋಗದಿಂದಿಗೆ ದೇಶಾದ್ಯಂತ ೫ ಮೆಡಿಕಲ್ ಹಬ್‌ಗಳನ್ನು ಸ್ಥಾಪಿಸುವುದಾಗಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಮುಂದಿನ ೧೦ ವರ್ಷಗಳಲ್ಲಿ ದೇಶದ ಔಷಧ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಭಾರತವನ್ನು ಬಯೋಫಾರ್ಮ ಕೇಂದ್ರವನ್ನಾಗಿ ಮಾಡುವುದಾಗಿ ತಿಳಿಸಿದ್ದಾರೆ. ಭಾರತವನ್ನು ವೈದ್ಯಕೀಯ ಪ್ರವಾಸೋದ್ಯಮದ ಕೇಂದ್ರವಾಗಿ ಉತ್ತೇಜಿಸಲು ೫ ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳಿಗೆ ಸರ್ಕಾರ ಬೆಂಬಲ ನೀಡಲಿದೆ.

<><><>

ತಂತ್ರಜ್ಞಾನ ಚಾಲಿತ ಕೃಷಿ ಬೆಂಬಲಿಸಲು ಬಹುಭಾಷಾ ಕೃತಕಬುದ್ಧಿಮತ್ತೆ ಸಾಧನವಾದ ಭಾರತ್ ವಿಸ್ತಾರ್ ಪ್ರಾರಂಭಿಸಲು ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದೆ. ಇದರಿಂದ ರೈತರಿಗೆ ಕೃಷಿ ಮಾಹಿತಿ, ಮಾರುಕಟ್ಟೆ ದರ ಮತ್ತು ಹವಾಮಾನ ಮುನ್ಸೂಚನೆಯನ್ನು ಅವರದೇ ಆದ ಭಾಷೆಯಲ್ಲಿ ಪಡೆಯಲು ಸಹಾಯಕವಾಗಲಿದೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಕೃಷಿ ಪದ್ಧತಿಯ ಪ್ಯಾಕೇಜ್‌ಅನ್ನು ಕೃತಕಬುದ್ಧಿಮತ್ತೆ ವ್ಯವಸ್ಥೆಗಳೊಂದಿಗೆ ಹೊಂದಿಸಲು ನಿರ್ಧರಿಸಲಾಗಿದೆ. ಇದು ರೈತರು ಉತ್ತಮ ಡೇಟಾಚಾಲಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಒಟ್ಟಾರೆ ಕೃಷಿ ಉತ್ಪಾದಕತೆಯನ್ನು ಸುಧಾರಿಸಲು ಸಹಾಯ ಮಾಡಲಿದೆ.

<><><>

ತೆಂಗು ಕೃಷಿ ಅಭಿವೃದ್ಧಿಗೆ ನಿರ್ಮಲಾ ಸೀತಾರಾಮನ್ ನೂತನ ಯೋಜನೆ ಘೋಷಿಸಿದ್ದಾರೆ. ಕರಾವಳಿ ಪ್ರದೇಶಗಳಲ್ಲಿ ತೆಂಗು, ಗೇರುಬೀಜ, ಕೊಕ್ಕೋ, ಉತ್ತೇಜನಕ್ಕೆ ನಿರ್ಧರಿಸಿರುವ ಅವರು, ತೆಂಗಿನಕಾಯಿ, ಸಂಸ್ಕರಣೆ ಹಾಗೂ ರಫ್ತಿಗೆ ಆದ್ಯತೆ ನೀಡಿದ್ದಾರೆ. ಇದರಿಂದ ರಾಜ್ಯದ ಕರಾವಳಿ ಜಿಲ್ಲೆಗಳ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಶ್ರೀಗಂಧದ ಬೆಳೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಆದ್ಯತೆ ನೀಡಿದೆ. ದೇಶಾದ್ಯಂತ ೫೦ ಅಣೆಕಟ್ಟುಗಳ ಅಭಿವೃದ್ಧಿಗೂ ನಿರ್ಧರಿಸಲಾಗಿದೆ.

<><><>

ದೇಶದಾದ್ಯಂತ ೭ ಹೈಸ್ಪೀಡ್ ರೈಲು ಕಾರಿಡಾರ್ ಸ್ಥಾಪಿಸುವುದಾಗಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ದೇಶದ ಸಾರಿಗೆ ಮೂಲಸೌಕರ್ಯಕ್ಕೆ ಉತ್ತೇಜನ ನೀಡುವ ಹಿನ್ನೆಲೆಯಲ್ಲಿ ಬೆಂಗಳೂರು, ಹೈದರಾಬಾದ್, ಚೆನ್ನೈ. ಪುಣೆಯಲ್ಲಿ ೭ ಹೈಸ್ಪೀಡ್ ರೈಲು ಕಾರಿಡಾರ್

ನಿರ್ಮಾಣವಾಗಲಿದೆ. ದೇಶದ ಪ್ರಮುಖ ನಗರಗಳನ್ನು ಸಂಪರ್ಕಿಸಲು ಮುಂಬೈ-ಪುಣೆ, ಪುಣೆ-ಹೈದರಾಬಾದ್, ಹೈದರಾಬಾದ್-ಬೆಂಗಳೂರು, ಚೆನ್ನೈ-ಬೆಂಗಳೂರು, ಹೈದರಾಬಾದ್-ಚೆನ್ನೈ, ದೆಹಲಿ-ವಾರಾಣಸಿ, ವಾರಾಣಸಿ-ಸಿಲಿಗುರಿ ಹೈಸ್ಪೀಡ್ ರೈಲು ಮಾರ್ಗಗಳನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ವಂದೇ ಭಾರತ್ ಎಕ್ಸ್‌ಪ್ರೆಸ್‌ನಂತಹ ರೈಲುಗಳು ಕಾರ್ಯ ನಿರ್ವಹಿಸಲು ಸಾಧ್ಯವಾಗುವಂತೆ ಅಸ್ತಿತ್ವದಲ್ಲಿರುವ ಕಾರಿಡಾರ್‌ಗಳನ್ನು ಹೈಸ್ಪೀಡ್ ಕಾರಿಡಾರ್‌ಗಳಾಗಿ ಪರಿವರ್ತಿಸುವ ಯೋಜನೆಗಳನ್ನು ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

**ಧ್ವನಿ: ನಿರ್ಮಲಾ ಸೀತಾರಾಮನ್ (೨೪ ಸೆಕೆಂಡ್‌ಗಳು)**

<><><>

ಆಕಾಶವಾಣಿಯಲ್ಲಿಂದು ೨೦೨೬-೨೭ರ ಕೇಂದ್ರ ಬಜೆಟ್ ಕುರಿತು ದಿನವಿಡಿ ವಿಶೇಷ ಚರ್ಚೆ ಪ್ರಸಾರವಾಗಲಿದೆ. ಪ್ರಮುಖ ಅರ್ಥಶಾಸ್ತ್ರಜ್ಞರು ಮತ್ತು ಮಾರುಕಟ್ಟೆ ತಜ್ಞರು ಬಜೆಟ್ ವಿಶ್ಲೇಷಣೆಯಲ್ಲಿ ಭಾಗಿಯಾಗಲಿದ್ದಾರೆ. ಹಿರಿಯ ಸರ್ಕಾರಿ ಅಧಿಕಾರಿಗಳು ವಿಶೇಷ ಸಂದರ್ಶನದಲ್ಲಿ ಭಾಗವಹಿಸಲಿದ್ದಾರೆ. ಇದು ನಮ್ಮ ಮೊಬೈಲ್ ಅಪ್ಲಿಕೇಷನ್, ನ್ಯೂಸ್ ಆನ್ ಏರ್, ಯೂಟ್ಯೂಬ್ ಚಾನೆಲ್ ಹಾಗೂ ಒಟಿಟಿ ಪ್ಲಾಟ್‌ಫಾರ್ಮ್ ವೇವ್ಸ್‌ನಲ್ಲಿಯೂ ಲಭ್ಯವಿರಲಿದೆ.

<><><>

ಬಜೆಟ್ ಮಂಡನೆಗೂ ಮುನ್ನ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಿ ಡಿಜಿಟಲ್ ಪ್ರತಿಯನ್ನು ನೀಡಿದರು. ಈ ವೇಳೆ ರಾಷ್ಟ್ರಪತಿಯವರು ನಿರ್ಮಲಾ ಸೀತಾರಾಮನ್ ಅವರಿಗೆ ಮೊಸರು ಮತ್ತು ಸಕ್ಕರೆ ತಿನ್ನಿಸಿದರು. ಬಜೆಟ್ ಮಂಡನೆಯಾಗುತ್ತಿದ್ದಂತೆಯೇ ಷೇರು ಮಾರುಕಟ್ಟೆಯಲ್ಲಿ ಬಾರಿ ಕುಸಿತ ಉಂಟಾಗಿದೆ. ಸೆನ್ಸೆಕ್ಸ್ ೨ ಸಾವಿರದ ಅಂಕಗಷ್ಟು ಇಳಿಕೆಯಾಗಿದೆ. ನಿಫ್ಟಿ ಸೂಚ್ಯಂಕ ೪೦೪ ಅಂಗಳಷ್ಟು ಕುಸಿತಗೊಂಡಿದೆ. ಬಜೆಟ್ ಮಂಡನೆಗೂ ಮುನ್ನವೇ ಚಿನ್ನ ಮತ್ತು ಬೆಳ್ಳಿಯ ಬೆಲೆಯಲ್ಲಿ ದಾಖಲೆಯ ಕುಸಿತ ಕಂಡು ಬಂದಿದೆ.

<><><>

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ಮಧ್ಯಮವರ್ಗದ ಪರವಾಗಿದ್ದು, ಆಶಾದಾಯಕವಾಗಿದೆ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ್ ಪ್ರತಿಕ್ರಿಯಿಸಿದ್ದಾರೆ.

ಧ್ವನಿ : ಬಿ.ಸಿ.ಪಾಟೀಲ್

ಈ ಬಜೆಟ್ ಅಭಿವೃದ್ಧಿಗೆ ಪೂರಕವಾಗಿದ್ದು, ದೇಶದ ವಿವಿಧ ವಲಯಗಳಿಗೆ ಹೊಸ ಚೈತನ್ಯ ನೀಡಲಿದೆ ಎಂದು ಹರಿಹರ ಶಾಸಕ ಬಿ.ಪಿ.ಹರೀಶ್ ಸಂತಸ ವ್ಯಕ್ತಪಡಿಸಿದ್ದಾರೆ.

ಧ್ವನಿ: ಬಿ.ಪಿ.ಹರೀಶ್

<><><>

ಶಿಕ್ಷಣ ಕ್ಷೇತ್ರಕ್ಕೂ ಈ ಬಾರಿಯ ಬಜೆಟ್‌ನಲ್ಲಿ ಆದ್ಯತೆ ನೀಡುವುದಾಗಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಲು ನಿರ್ಧರಿಸಲಾಗಿದೆ. ಪ್ರತಿಯೊಂದು ಜಿಲ್ಲೆಗಳಲ್ಲಿ ಒಂದು ಬಾಲಕಿಯರ ವಿದ್ಯಾರ್ಥಿನಿ ನಿಲಯ ಆರಂಭಿಸಲು ಸರ್ಕಾರ ನಿರ್ಧರಿಸಿದೆ. ಮಹಿಳೆಯರ ಪ್ರಗತಿಗಾಗಿ ದೇಶದಲ್ಲಿ ಶಿ ಮಾರ್ಟ್ (She Mart)ಗಳನ್ನು ಸ್ಥಾಪಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಖಾದಿ ಮತ್ತು ಗ್ರಾಮದ್ಯೋಗ ಮಹತ್ಮಾಗಾಂಧಿ ಗ್ರಾಮಸ್ವರಾಜ್ ಯೋಜನೆಯನ್ನು ನನಸಾಗಿಸಲು ಖಾದಿ ಮತ್ತು ಹ್ಯಾಂಡ್‌ಲೂಮ್‌ಗೆ ಉತ್ತೇಜನ ನೀಡುವುದಾಗಿ ತಿಳಿಸಿದ್ದಾರೆ. ಜವಳಿ ಕ್ಷೇತ್ರದ ಅಭಿವೃದ್ಧಿಗಾಗಿ ರಾಷ್ಟ್ರೀಯ ನೀತಿ ಘೋಷಣೆ ಮಾಡಿದ್ದಾರೆ. ಖಾದಿ ಉದ್ಯಮದ ಅಭಿವೃದ್ಧಿಗೆ ಹೊಸ ಯೋಜನೆ ಹಾಗೂ ಕಂಟೈನರ್ ಅಭಿವೃದ್ಧಿಗಾಗಿ ೧೦ ಸಾವಿರ ಕೋಟಿ ರೂಪಾಯಿ ಮೀಸಲಿಡುವುದಾಗಿ ಹೇಳಿದ್ದಾರೆ. ತಮಿಳುನಾಡು, ಕೇರಳ, ಒಡಿಶಾ, ಆಂಧ್ರ ಪ್ರದೇಶದಲ್ಲಿ ನಾಲ್ಕು ಖನಿಜ ಕಾರಿಡಾರ್ ಸ್ಥಾಪನೆ ಮಾಡುವುದಾಗಿ ಘೋಷಿಸಿದ್ದಾರೆ. ಕೈಗಾರಿಕೆಗಳ ಕ್ಲಸ್ಟರ್‌ಗಳ ಅಭಿವೃದ್ಧಿಗೆ ಉತ್ತೇಜನ ನೀಡುವುದಾಗಿ ತಿಳಿಸಿದ ಅವರು, ಸಣ್ಣ ಮತ್ತು ಮಧ್ಯಮವರ್ಗದ ಕೈಗಾರಿಕೆಗಳಿಗೆ ೧೦ ಸಾವಿರ ಕೋಟಿ ರೂಪಾಯಿ  ಹಾಗೂ ಬಯೋಫಾರ್ಮ್‌ಗೆ ೧೦ ಸಾವಿರ ಕೋಟಿ ಮೀಸಲಿಡುವುದಾಗಿ ತಿಳಿಸಿದ್ದಾರೆ.

<><><>

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಐತಿಹಾಸಿಕ ಬಜೆಟ್ ಮಂಡಿಸಿದ್ದು, ದೇಶದ ಭವಿಷ್ಯದ ಕನಸುಗಳನ್ನು ಸಾಕಾರಗೊಳಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ಬಜೆಟ್ ಬಳಿಕ ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ಶೀಘ್ರವೇ ಭಾರತ ಮೂರನೇ ಆರ್ಥಿಕ ರಾಷ್ಟ್ರವಾಗಿ ಹೊರಹೊಮ್ಮಲಿದೆ. ಈ ಬಜೆಟ್‌ನಿಂದ ದೇಶದ ಆರ್ಥಿಕ ಶಕ್ತಿಗೆ ಹೊಸ ಸ್ಪರ್ಶ ಸಿಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

<><><>

೨೦೨೬-೨೭ರ ಬಜೆಟ್ ಅಂದಾಜಿನ ಪ್ರಕಾರ ಒಟ್ಟು ವೆಚ್ಚ ೫೩ ಲಕ್ಷದ ೪೭ ಸಾವಿರದ ೩೧೫ ಕೋಟಿಗಳಷ್ಟಿದೆ. ಇದರಲ್ಲಿ ಒಟ್ಟು ಬಂಡವಾಳ ವೆಚ್ಚ ೧೨ ಲಕ್ಷದ ೨೧ ಸಾವಿರದ ೮೨೧ ಕೋಟಿಗಳಷ್ಟಿದೆ. ಪರಿಣಾಮಕಾರಿ ಬಂಡವಾಳ ವೆಚ್ಚ ೧೭ ಲಕ್ಷದ ೧೫ ಸಾವಿರದ ೫೨೩ ಕೋಟಿಗಳಾಗಿವೆ. ೨೦೨೬-೨೭ರ ಬಜೆಟ್‌ನಲ್ಲಿ ರಾಜ್ಯದ ಪಾಲು, ಅನುದಾನ/ಸಾಲಗಳು ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಬಿಡುಗಡೆಗಳು ಇತ್ಯಾದಿ ವಿಕೇಂದ್ರೀಕರಣ ಸೇರಿದಂತೆ ರಾಜ್ಯಗಳಿಗೆ ವರ್ಗಾಯಿಸಲಾಗುತ್ತಿರುವ ಒಟ್ಟು ಸಂಪನ್ಮೂಲಗಳು ೨೫ ಲಕ್ಷದ ೪೩ ಸಾವಿರದ ೭೬೯ ಕೋಟಿಗಳಷ್ಟಿದ್ದು, ಇದು ೨೦೨೪-೨೫ರ ಹಣಕಾಸು ವರ್ಷದ ವಾಸ್ತವಿಕ ವೆಚ್ಚಕ್ಕಿಂತ ೩ ಲಕ್ಷದ ೭೮ ಸಾವಿರದ ೨೬೩ ಕೋಟಿಗಳ ಹೆಚ್ಚಳವನ್ನು ತೋರಿಸುತ್ತಿದೆ. ಈ ಬಾರಿ ರಕ್ಷಣಾ ಕ್ಷೇತ್ರಕ್ಕೆ ೬.೮ ಲಕ್ಷ ಕೋಟಿ ರೂಪಾಯಿಗಳ ಹಣವನ್ನು ಮೀಸಲಿಡಲಾಗಿದೆ. ಇದು ಕಳೆದ ವರ್ಷಕ್ಕಿಂತ ಸುಮಾರು ಶೇಕಡ ೯.೫೩ರಷ್ಟು ಹೆಚ್ಚಳವಾಗಿದೆ. ದೇಶದ ಒಟ್ಟು ಬಜೆಟ್‌ನ ಸುಮಾರು ಶೇಕಡ ೧೩.೪೫ ರಷ್ಟು ಭಾಗವನ್ನು ರಕ್ಷಣಾ ಕ್ಷೇತ್ರಕ್ಕೆ ನೀಡಲಾಗಿದೆ. ಇದು ಎಲ್ಲ ಸಚಿವಾಲಯಗಳಿಗಿಂತ ಅತಿ ಹೆಚ್ಚಿನ ಹಂಚಿಕೆಯಾಗಿದೆ.

<><><><>

ದೇಶದ ಆರ್ಥಿಕ ಪ್ರಗತಿಯ ವೇಗವನ್ನು ಕಾಯ್ದುಕೊಂಡು ಹೋಗಲು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ೬ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಹಲವಾರು ಪ್ರಮುಖ ವಲಯಗಳಲ್ಲಿ ಉತ್ಪಾದನೆ ಹಾಗೂ ತಯಾರಿಕೆಯನ್ನು ಬಲಪಡಿಸುವುದು, ಪ್ರಮುಖ ಕೈಗಾರಿಕಾ ವಲಯಗಳಿಗೆ ಪುಷ್ಠಿ ನೀಡುವುದು. ಪ್ರಬಲ, ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳನ್ನು ಸೃಷ್ಟಿಸುವುದು, ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡುವುದು. ದೀರ್ಘಾವಧಿ ಭದ್ರತೆ ಮತ್ತು ಸ್ಥಿರತೆ ಸಾದಿಸುವುದು, ನಗರಗಳ ಆರ್ಥಿಕ ಪ್ರದೇಶಗಳನ್ನು ಅಭಿವೃದ್ಧಿ ಪಡಿಸುವುದು ಸೇರಿದಂತೆ ವೈದ್ಯಕೀಯ, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್, ರಾಸಾಯನಿಕ ವಸ್ತುಗಳ ತಯಾರಿಕೆ ಹೆಚ್ಚಿಸಲು ಸರ್ಕಾರ ಒತ್ತು ನೀಡಲಿದೆ ಎಂದು ತಿಳಿಸಿದ್ದಾರೆ.

<><><><>

ಆಕಾಶವಾಣಿ ಬೆಂಗಳೂರು ಮತ್ತು ಧಾರವಾಡದ ಪ್ರಾದೇಶಿಕ ಸುದ್ದಿವಿಭಾಗಗಳ ಮುಖ್ಯಸ್ಥರಾಗಿದ್ದ, ಉಪನಿರ್ದೇಶಕ ರಾಯ್ ಚಾಕೋ ಅವರು ನಿನ್ನೆ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. ೧೯೯೩ರಲ್ಲಿ ಭಾರತೀಯ ಮಾಹಿತಿ ಸೇವೆಗೆ ಸೇರಿದ ಅವರು ಸುಮಾರು ೩೨ ವರ್ಷಗಳ ದೀರ್ಘ ಸೇವೆಯಲ್ಲಿ ಆಕಾಶವಾಣಿ ನವದೆಹಲಿ, ಆಕಾಶವಾಣಿ ತಿರುವನಂತಪುರಂ, ಆಕಾಶವಾಣಿ ಕೋಯಿಕ್ಕೋಡ್, ಕ್ಷೇತ್ರ

ಪ್ರಸಾರ ನಿರ್ದೇಶನಾಲಯ, ಪ್ರಕಾಶನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಇವರ ಸುಮಾರು ೨೦೦ ಕ್ಕೂ ಹೆಚ್ಚು ಲೇಖನಗಳು ಹಾಗೂ ೮ ಪುಸ್ತಕಗಳು ಪ್ರಕಟವಾಗಿವೆ. ಇಂದಿನಿಂದ ಪ್ರಾದೇಶಿಕ ಸುದ್ದಿ ವಿಭಾಗದ ನೂತನ ಮುಖ್ಯಸ್ಥರಾಗಿ ಸಹಾಯಕ ನಿರ್ದೇಶಕರಾದ ತುಕಾರಾಮ ಗೌಡ.ಜಿ ಅಧಿಕಾರ ವಹಿಸಿಕೊಂಡಿದ್ದಾರೆ. ಭಾರತೀಯ ಮಾಹಿತಿ ಸೇವೆಯ ಅಧಿಕಾರಿಯಾದ ಅವರು, ಕೇಂದ್ರ ವಾರ್ತಾ ಶಾಖೆ ದೃಶ್ಯಪ್ರಚಾರ ನಿರ್ದೇಶನಾಲಯ, ಕೇಂದ್ರ ಸಂವಹನ ಇಲಾಖೆ, ಬೆಂಗಳೂರು, ಶಿವಮೊಗ್ಗ, ಮಂಗಳೂರುಗಳಲ್ಲಿ ಕರ್ತವ್ಯ ನಿರ್ವಹಿಸಿ ೯ ತಿಂಗಳಿನಿಂದ ಬೆಂಗಳೂರು ಪ್ರಾದೇಶಿಕ ಸುದ್ದಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

<><> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <><>